‘ಅಲ್ಲದೆ ಸಮಯ ಸಹ ಶೀಘ್ರವೇ ಬದಲಾಗುತ್ತಾ ಹೋಗುತ್ತದೆ. ಪರದೇಶದಲ್ಲಿನ ಆಚಾರವಿಚಾರ ಹೇಗಿರುವುದೋ ಏನೋ.’ ಬೀಗರು ತಮ್ಮ ಮನಸ್ಸಿನಲ್ಲಿದ್ದದ್ದನ್ನು ಹೇಳಿದರು, ‘ಮೋಹನದಾಸನ ವಿಷಯವೇ ಬೇರೆ. ಅವನನ್ನು ಯಾವುದೇ ಪಾಪ ಸ್ಪರ್ಶಿಸಲಾರದು... ಆದರೆ ಹರಿಲಾಲ ಇನ್ನೂ ಹುಡುಗ...ಅಲ್ಲದೆ ಗುಲಾಬ ಮತ್ತು ಹರಿಲಾಲ ಇಬ್ಬರ ಮನಸ್ಸು ಒಂದಾಗಿದೆ, ಇದು ನಮಗೆ ತಿಳಿಯದ ವಿಷಯವೇನಲ್ಲ.’

‘ಬೀಗರೇ, ನನಗೆಲ್ಲವೂ ತಿಳಿದಿದೆ, ನನಗೆಲ್ಲವೂ ಅರ್ಥವಾಗುತ್ತದೆ. ನೀವು ನಿಶ್ಚಿಂತೆಯಿಂದಿರಿ. ನೀವು ಮದುವೆಗೆ ಮುಹೂರ್ತ ನೋಡಿಸಿ, ದಿಬ್ಬಣದ ಸ್ವಾಗತಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಿ. ನಾನು ಮೋಹನ ಭೈಯ್ಯಾನಿಗೆ ಪತ್ರ ಬರೆಯುತ್ತಿದ್ದೇನೆ.’ ಇದೆಲ್ಲವೂ ಹರಿಲಾಲನಿಗೆ ಇಷ್ಟವಾಗುತ್ತಿತ್ತು. ಅವನಿಚ್ಛೆ ಪೂರ್ಣವಾಗುತ್ತಿತ್ತು. ಪ್ರತ್ಯೇಕವಾಗಿ ಅವನನ್ನು ಕೇಳುವ ಅಗತ್ಯವಿರಲಿಲ್ಲ. ಹರಿಲಾಲ ಡೆಕ್‌ನಲ್ಲಿ ನಿಂತು ಆಫ್ರಿಕಾದ ದಿಕ್ಕಿನಲ್ಲಿ ವ್ಯಾಪಿಸಿದ್ದ ಅಗಾಧ ಜಲರಾಶಿಯನ್ನು ನೋಡಿದ.

ಗಾಳಿಯಲ್ಲಿ ತೇವಾಂಶ ಹೆಚ್ಚುತ್ತಿದೆ ಎಂದು ಹರಿಲಾಲನಿಗೆ ಅನ್ನಿಸಿತು. ಶರೀರ ಕಂಪಿಸಿತು. ಹಡಗು ಚಲಿಸಿದಾಗ ನೀರಿನಲ್ಲುಂಟಾಗುತ್ತಿದ್ದ ಗಾಯದಂತೆಯೇ ಅವನ ಹೃದಯದಲ್ಲಿ ಗಾಯಗಳಾಗಿದ್ದವು. ಅವನ ವಿವಾಹದ ಸುದ್ದಿಯನ್ನು ತಿಳಿದಾಗ ಆಫ್ರಿಕಾದಿಂದ ಬಾಪೂ ದೊಡ್ಡಪ್ಪನಿಗೆ ಬರೆದ ಪತ್ರವನ್ನು ಹರಿಲಾಲನಿಂದ ಮರೆಯಲು ಸಾಧ್ಯವಿರಲಿಲ್ಲ. ಮದುವೆಗೆ ಬಾಪೂ ಬರಲಿಲ್ಲ, ಬಾ ಸಹ ಬರಲಿಲ್ಲ. ಒಂದು ವೇಳೆ ವರನ ತಾಯಿಯಾಗಿ ತಲೆಗೆ ಮುಕುಟ ಕಟ್ಟಿಕೊಂಡು, ಕೈಯಲ್ಲಿ ದೀಪ ಹಿಡಿದು ಬಾ ಈ ವಿವಾಹದಲ್ಲಿ ಭಾಗವಹಿಸಿದ್ದರೆ ತನಗೆ ಅದೆಷ್ಟು ಸಂತೋಷವಾಗುತ್ತಿತ್ತು! ಬಾಬಾಪೂ ಇಬ್ಬರೂ ವಿವಾಹಕ್ಕೆ ಬಂದಿದ್ದರೆ ತನ್ನ ಸಂತಸಕ್ಕೆ ಮಿತಿಯೇ ಇರುತ್ತಿರಲಿಲ್ಲ. ಆದರೆ ಹರಿಲಾಲನಿಗೆ, ಬಾಪೂ ಹೋರಾಟವನ್ನು ಮಾಡುತ್ತಿದ್ದಾರೆ, ಅವರು ಹೋರಾಟದ ಕ್ಷೇತ್ರವನ್ನು ಬಿಟ್ಟು ಬರಲಾರರು ಎಂಬುದು ತಿಳಿದಿತ್ತು. ಆದರೆ...ಆದರೆ...

ತನ್ನ ಬಾಯಿಯಲ್ಲಿ ಕಹಿ ಬಂದಂಥ ಅನುಭವವಾಗಿ ಹರಿಲಾಲ ಉಗಿದು ತನ್ನ ಗಂಟಲನ್ನು ಸ್ವಚ್ಛಮಾಡಿಕೊಂಡ. ಇದಕ್ಕೆ ವಿರುದ್ಧವಾಗಿ ಬಾಪೂ ದೊಡ್ಡಪ್ಪನಿಗೆ ಪತ್ರ ಬರೆದರು

‘ಹರಿಲಾಲನ ವಿವಾಹಕ್ಕೆ ನನ್ನ ಒಪ್ಪಿಗೆಯಿಲ್ಲ. ಖಂಡಿತ ಈ ಮದುವೆ ಆಗಬಾರದು, ಆಗಲೂ ಏನೂ ಆಗುವುದಿಲ್ಲ. ನಾನೀಗ ಹರಿಲಾಲ ನನ್ನ ಒಬ್ಬ ಪುತ್ರನೆಂದು ಯೋಚಿಸುವುದನ್ನು ಬಿಟ್ಟಿದ್ದೇನೆ.’

ಬಾಪೂ ಹೀಗೇಕೆ ಬರೆದಿದ್ದರು? ತನ್ನ ಮದುವೆಯಲ್ಲಿ ದೋಷವಾದರೂ ಏನಿತ್ತು? ದೊಡ್ಡಪ್ಪ ಮತ್ತು ಗೋಕಿ ಸೋದರತ್ತೆ ತನ್ನ ಕೆಡುಕನ್ನು ಬಯಸುತ್ತಿರಲಿಲ್ಲ. ಅಲ್ಲದೆ ಗುಲಾಬಳಂಥ ಸೊಸೆ

ಬಾಪೂ ಸ್ವತಃ ಗುಲಾಬಳನ್ನು ನೋಡಿರಲಿಲ್ಲವೇ! ಗುಲಾಬಳನ್ನು ಹರಿಲಾಲನಿಗಾಗಿ ಬಾಪೂ ಮನಸ್ಸಿನಲ್ಲಿ ಇಷ್ಟಪಟ್ಟಿದ್ದರು ಎಂದು ದೊಡ್ಡಪ್ಪನೇ ಹೇಳುತ್ತಿದ್ದರು...ಹೀಗಿರುವಾಗ...ಬಾಪೂ ಹೀಗೇಕೆ ಬರೆಯುತ್ತಿದ್ದಾರೆ?

ಹರಿಲಾಲನಿಂದ ಈ ಒಗಟನ್ನು ಬಗೆಹರಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈ ಒಗಟನ್ನು ಬಿಡಿಸಲು ಹರಿಲಾಲ ತಲೆಕೆಡಿಸಿಕೊಳ್ಳುವುದನ್ನು ತಕ್ಷಣ ಕೈಬಿಟ್ಟಿದ್ದ. ಬಾಪೂ ಅವರ ಅನೇಕ ವಿಷಯಗಳು ತನಗೆ ಮಾತ್ರವಲ್ಲ, ದೊಡ್ಡಪ್ಪನಿಗೆ ಮತ್ತು ಬಾ ಅವರಿಗೂ ಅರ್ಥವಾಗುತ್ತಿರಲಿಲ್ಲ. ಬಾಪೂ ಅವರ ವಿಷಯವೇ ಅದ್ಭುತವಾಗಿರುತ್ತಿತ್ತು. ಜಗತ್ತಿನಲ್ಲಿ ಎಲ್ಲರು, ಸಾಮಾನ್ಯ ನಾಗರಿಕರಂತೆ ಒಳ್ಳೆಯ ನೌಕರಿ ಅಥವಾ ಒಳ್ಳೆಯ ಕೆಲಸ ಕಾರ್ಯಗಳಿಗೆ ಪ್ರಯತ್ನವನ್ನು ಮಾಡುತ್ತಾರೆ, ಆದರೆ ಬಾಪೂ ಇದೆಲ್ಲಕ್ಕಿಂತ ಭಿನ್ನರಾಗಿದ್ದರು. ಬಾಪೂ ಕೆಲಸದಲ್ಲಿಯೂ ಎಲ್ಲಿ ಗಮನವನ್ನು ಕೊಡುತ್ತಿದ್ದರು! ಅವರು ಮಾಡುವ ಕೆಲಸಗಳಲ್ಲಿ ಸಂಪಾದನೆಯಾದರೂ ಎಲ್ಲಿರುತ್ತಿತ್ತು! ಬಾಪೂ ಅವರಂತಿದ್ದ ಇನ್ನಿತರ ಬ್ಯಾರಿಸ್ಟರ್‌ಗಳು ಸಾವಿರಾರು ರೂಪಾಯಿಗಳನ್ನು ಸಂಪಾದಿಸಿ ತಮ್ಮ ತಮ್ಮ ಮನೆ ಮಠಗಳನ್ನು ಸಮೃದ್ಧಗೊಳಿಸುತ್ತಿದ್ದರು, ಆದರೆ ಬಾಪೂ, ಬಾ ಅವರಿಗೆ ಲಭಿಸಿದ್ದ ಆ ಅಮೂಲ್ಯ ಹಾರವನ್ನೂ ಇಟ್ಟುಕೊಳ್ಳಲು ಬಿಡಲಿಲ್ಲ. ಸ್ವತಃ ದೊಡ್ಡಪ್ಪನಿಗೆ ಬಾಪೂ ಪತ್ರವನ್ನು ಬರೆದಿದ್ದರು

‘ನಮ್ಮ ಕುಟುಂಬ ಕೇವಲ ನಮ್ಮಿಬ್ಬರು ಸಹೋದರರ ಕುಟುಂಬವಲ್ಲ, ಜೀವಿಗಳೆಲ್ಲಾ ನನ್ನ ಕುಟುಂಬ.’

ಬಾಪೂ ಅವರ ಮನಸ್ಸಿನಲ್ಲೇನಿದೆ ಎಂಬುದನ್ನು ತಿಳಿಯುವುದು ತುಂಬಾ ಕಷ್ಟವಾಗಿತ್ತು. ತನಗೆ ಬಾಪೂ ಅವರ ಮನಸ್ಸನ್ನು ತಿಳಿಯಲು ಸಾಧ್ಯವಿಲ್ಲ ಎಂದೇನಿಲ್ಲ, ಆದರೆ ಬಾಪೂ ಹೇಳುವುದನ್ನು ಮತ್ತು ಮಾಡುವುದನ್ನು ನಿಷ್ಠೆಯಿಂದ ಮಾಡುತ್ತಾರೆ, ಪ್ರಾಮಾಣಿಕವಾಗಿ ಮಾಡುತ್ತಾರೆ; ಹರಿಲಾಲನಿಗೆ ಇದು ಅವನ ಮನಸ್ಸಿನ ಆಳದಿಂದ ತಿಳಿದಿತ್ತು. ಬಾಪೂ ಇಂಥ ಪತ್ರವನ್ನು ಬರೆದಿದ್ದರೋ, ಇಲ್ಲವೋ ಎಂಬುದನ್ನೇ ಮರೆಯಲು ಹರಿಲಾಲ ಪ್ರಯತ್ನಿಸಿದ.

ಜೋಹಾನ್ಸ್‌ಬರ್ಗ್‌ನಲ್ಲಿ ಈಗ ಬಾಪೂ ಅವರ ಕಚೇರಿ ಹೇಗಿರಬಹುದು? ಹೊಸ ಮನೆಯಲ್ಲಿ ಎಲ್ಲಾ ಅನುಕೂಲಗಳಿರಬಹುದು ಅಥವಾ ಇಲ್ಲದಿರುವ ಬಗ್ಗೆ ಹರಿಲಾಲ ಕಲ್ಪಿಸಿಕೊಂಡ. ಮಣಿಲಾಲ ಹರಿಲಾಲನಿಗೆ, ‘ಈಗ ಬಾಪೂ ಜೋಹಾನ್ಸ್‌ಬರ್ಗ್‌ನಿಂದ ತುಂಬಾ ದೂರದಲ್ಲಿರುವ ಡರಬನ್ ನಗರದ ಸಮೀಪದಲ್ಲಿ ಒಂದು ವಿಶಾಲವಾದ ಆಶ್ರಮವನ್ನು ಸ್ಥಾಪಿಸಿದ್ದಾರೆ... ಇಲ್ಲಿ ಕಿತ್ತಲೆ, ಮಾವು ಮತ್ತು ಆಲೂಚಾ ಹಣ್ಣುಗಳು ಚೆನ್ನಾಗಿ ಬೆಳೆಯುತ್ತವೆ.

ಹರಿಯುವ ನೀರಿನ ಝರಿಗಳು ಸಹ ತುಂಬಾ ಸುಂದರವಾಗಿವೆ, ನಾವು ಸ್ನಾನಕ್ಕೆ ಅಲ್ಲಿಗೆ ಹೋಗುತ್ತೇವೆ. ಇಲ್ಲಿ ಮೈನಾ ಅಥವಾ ಗುಬ್ಬಚ್ಚಿ ಕಾಣಿಸುವುದೇ ಇಲ್ಲ, ಆದರೆ ಚಂಡೋಲ್ ಪಕ್ಷಿಗಳು ಮಧುರವಾಗಿ ಹಾಡುತ್ತವೆ. ಇಲ್ಲಿ ವಿಷದ ಹಾವುಗಳ ಭಯ ಸಾಮಾನ್ಯ. ಇಲ್ಲಿ ಹುಲ್ಲು ಚೆನ್ನಾಗಿ ಬೆಳೆದಿದ್ದು, ಯಾವಾಗ ಹಾವುಗಳು ಕಾಣಿಸಿಕೊಳ್ಳುವವೋ, ಹೇಳಲು ಬರುವುದಿಲ್ಲ.’ ಎಂದು ಪತ್ರವನ್ನು ಬರೆದಿದ್ದ.

ಹರಿಲಾಲನ ಕಣ್ಣುಗಳೆದುರು ಕಾಣದ ಆ ಆಶ್ರಮದ ಚಿತ್ರ ಮೂಡಿತು. ಮೈನಾ ಮತ್ತು ಗುಬ್ಬಚ್ಚಿ ಇಲ್ಲದ ಮನೆಯನ್ನು ಕಲ್ಪಿಸಿಕೊಳ್ಳುವುದು ಅವನಿಗೆ ವಿಚಿತ್ರವೆಂದು ತೋರಿತು. ಮಣಿಲಾಲ ಮುಂದುವರೆಸಿ ಬರೆದಿದ್ದ

‘ಹರಿ ಅಣ್ಣಾ, ಬಾಪೂ ಈ ಹೊಸ ಆಶ್ರಮಕ್ಕೆ ಏನೆಂದು ಹೆಸರಿಟ್ಟಿದ್ದಾರೆ, ಗೊತ್ತೆ? ‘ನಮ್ಮ ಕಥೆಗಳಲ್ಲಿ ಗರುಡ ಪಕ್ಷಿ ಇರುವಂತೆ ಗ್ರೀಕ್ ಪುರಾಣ ಕಥೆಗಳಲ್ಲಿ ಫೀನಿಕ್ಸ್ ಎಂಬ ಒಂದು ವಿಶಾಲ ಪಕ್ಷಿಯಿದೆ, ಈ ಪಕ್ಷಿಯ ಆಯಸ್ಸು ಪೂರ್ಣಗೊಂಡಾಗ, ಅದೇ ಸುಟ್ಟು ಸಾಯುತ್ತದೆ. ಅದರ ಶರೀರ ಬೂದಿಯಾಗಿ ಮಾರ್ಪಡುತ್ತದೆ. ನಂತರ ಆ ಬೂದಿಯಿಂದಲೇ ಹೊಸದೊಂದು ಫೀನಿಕ್ಸ್ ಜನ್ಮ ತಾಳುತ್ತದೆ. ಹೀಗೆ ಬೂದಿಯಾಗಿ ಆ ಪಕ್ಷಿ ಹೊಸ ಜನ್ಮವನ್ನು ಧರಿಸುತ್ತದೆ.

ನಮ್ಮ ಈ ಹೋರಾಟದಲ್ಲಿ ಅಗತ್ಯ ಬಿದ್ದರೆ ನಾವೆಲ್ಲರೂ ಸುಟ್ಟು ಬೂದಿಯಾಗುತ್ತೇವೆ, ಆದರೆ ಮತ್ತೆ ಈ ಬೂದಿಯಿಂದಲೇ ನಮ್ಮ ಪುನರ್ಜನ್ಮವಾಗುವುದು, ಅದು ಸತ್ಯದ ಪ್ರಕಾಶವಾಗುವುದು. ನಮ್ಮ ಶರೀರವೇ ಬೂದಿಯಾಗುವುದು, ಸತ್ಯದ ಬೂದಿಯಲ್ಲ. ಸತ್ಯ ಸದಾ ಮಿನುಗುತ್ತದೆ’ ಎಂದು ಬಾಪೂ ಹೇಳುತ್ತಾರೆ. ಅದಕ್ಕಾಗಿಯೇ ಬಾಪೂ ಅವರು ಈ ಆಶ್ರಮಕ್ಕೆ ಫೀನಿಕ್ಸ್ ಆಶ್ರಮವೆಂದು ಹೆಸರಿಟ್ಟಿದ್ದಾರೆ.’

ಫೀನಿಕ್ಸ್ ಆಶ್ರಮದ ವರ್ಣನೆಯನ್ನು ಓದಿ ಹರಿಲಾಲನ ಮನಸ್ಸು ಫೀನಿಕ್ಸ್ ಆಶ್ರಮವನ್ನು ನೋಡುವುದಕ್ಕೆ ಹೋಗಲು ಬಯಸಿತು. ಅವನು ವ್ಯಗ್ರನಾದ. ಬಾಪೂ ಅವರು ಆಶ್ರಮಕ್ಕೆ ಇಟ್ಟ ಹೆಸರಿನಿಂದ ಹರಿಲಾಲ ಗದ್ಗದಿತನಾದ. ದೊಡ್ಡಪ್ಪನಿಗೆ ಬಾಪೂ ಅವರಿಂದ ಬಂದ ಪತ್ರವನ್ನು ಓದಿ ಅವನಿಗೆ ಭ್ರಮೆಯುಂಟಾಗಿತ್ತು, ಇಂದು ಅದಕ್ಕೆ ಸಮಾಧಾನ ಲಭಿಸಿತ್ತು.

ಬಾಪೂ ಅವರ ಯಾವುದೇ ಮಾತನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿತ್ತು. ಇಡೀ ಇಪ್ಪತ್ತು ದಿನದ ಸಮುದ್ರ ಯಾತ್ರೆಯ ನಂತರ ಹಡಗು ದಕ್ಷಿಣ ಆಫ್ರಿಕಾದ ದಡದಲ್ಲಿ ಲಂಗರು ಹಾಕಿದಾಗ, ಹರಿಲಾಲ ಒಂದೇ ವಿಧದ ಪ್ರಯಾಣದಿಂದ ಬೇಸರಗೊಂಡಿದ್ದ. ಆರೇಳು ವರ್ಷಗಳ ಹಿಂದೆ ಅವನು ಕೈಗೊಂಡಿದ್ದ ಪ್ರಯಾಣದಲ್ಲಿ ಅವನೊಂದಿಗೆ ಬಾಬಾಪೂ ಮತ್ತು ಎಲ್ಲರೂ ಇದ್ದರು; ಆಗ ಅವನಿಗೆ ತಿಳಿವಳಿಕೆಯೂ ಅಷ್ಟಿರಲಿಲ್ಲ. ಆದರೆ ಈ ಬಾರಿಯ ಪ್ರಯಾಣದಲ್ಲಿ ಅವನು ಯೋಚನೆಗಳ ಆಕ್ರಮಣ ಮತ್ತು ಒಂಟಿತನದ ನಡುವೆ ಸೊರಗಿದ್ದ. ಡರಬನ್ ದಡದ ಮೇಲೆ ಅವನ ದೃಷ್ಟಿ ಬೀಳುತ್ತಲೇ ಹರಿಲಾಲ ಕುಣಿದು ಕುಪ್ಪಳಿಸಿದ.

ಡರಬನ್ ರೇವುಪಟ್ಟಣದಲ್ಲಿ ಹರಿಲಾಲ ಕಾಲಿಟ್ಟಾಗ, ಇಪ್ಪತ್ತು ದಿನಗಳ ದಣಿವಿನಿಂದ ಅವನ ಶರೀರ ಚೂರು ಚೂರಾಗಿತ್ತು. ಅವನ ಕಣ್ಣುಳೆದುರು ಬಾಬಾಪೂ, ಮಣಿಲಾಲ, ರಾಮದಾಸ ಮತ್ತು ದೇವದಾಸ ಎಲ್ಲರೂ ಇದ್ದರು; ಅವನ ಕಣ್ಣುಗಳಲ್ಲಿ ಹೊಸ ಭವಿಷ್ಯದಲ್ಲಿಂದ ಹೊಸ ಹಾದಿಯನ್ನು ನಿರ್ಮಿಸುವ ಉತ್ಸಾಹವಿತ್ತು.

(ಸಶೇಷ)